**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.**

**ಸಿ.ಸಿ.ನಂ. 37/2019**

ಸಿ.ಡಬ್ಲ್ಯೂ -01

ಪಿ.ಡಬ್ಲ್ಯೂ-01

ಸಾಕ್ಷಿದಾರನ ಹೆಸರು :- ಚಲುವರಾಜು

ತಂದೆಯ ಹೆಸರು :- ಚಲುವಯ್ಯ

ವಯಸ್ಸು :- 45 ವರ್ಷ

ಉದ್ಯೋಗ :- ಖಾಸಗಿ ಕೆಲಸ

ವಾಸ :- ಅರಳಿಮರದದೊಡ್ಡಿ

**ಸಾಕ್ಷಿಗೆ ದಿಃ 14.08.2024 ರಂದು ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ಚಾ.ಸಾ. 2 ನನ್ನ ತಂದೆ. ಚಾ.ಸಾ. 3 ನನ್ನ ತಾಯಿ. ಚಾ.ಸಾ. 4 ನನ್ನ ತಂಗಿ. ಆರೋಪಿತರು ನನಗೆ ಗೊತ್ತು. ನನ್ನ ತಾತನ ಹೆಸರಿಗೆ ಸರ್ವೆ ನಂ 50/7 ಮತ್ತು 50/8 ರಲ್ಲಿ 15 ಗುಂಟೆ ಇದ್ದು ಸದರಿ ಜಮೀನನ್ನು ನಾವೆ ಉಳುಮೆ ಮಾಡುತ್ತಿದ್ದು ಆರೋಪಿ 1 ಸರಕಾರಿ ಕೆಲಸದಲ್ಲಿದ್ದು ಈಗ ನಿವೃತ್ತಿ ಹೊಂದಿದ ಬಳಿಕ ನಿಮಗೆ ಜಮೀನಿನಲ್ಲಿ ಭಾಗ ಇಲ್ಲವೆಂದು ಹೇಳಿ ನಮಗೆ ಉಳುಮೆ ಮಾಡಲು ಬಿಡುತ್ತಿಲ್ಲ. ಚಾ.ಸಾ, 2 ದಿಃ 12.01.2019 ರಂದು 12.30 ಗಂಟೆಗೆ ಕೇಳಲು ಹೋದಾಗ ಆರೋಪಿ 1 ಚಪ್ಪಲಿಯಿಂದ ನನ್ನ ತಂದೆಗೆ ಬೆನ್ನಿಗೆ ಹೊಡೆದಿರುತ್ತಾರೆ.

ನನ್ನ ತಾಯಿ ಚಾ.ಸಾ. 3 ಬಿಡಿಸಿಕೊಳ್ಳಲು ಹೋದಾಗ ಚಾ,ಸಾ. 3 ಮತ್ತು 4 ಅವರ ಸೀರೆಯನ್ನು ಎಳೆದಾಡಿರುತ್ತಾರೆ. ನಂತರ ನಾನು ಬಿಡಿಸಿಕೊಳ್ಳಲು ಹೋದಾಗ ಆರೋಪಿ 2 ನನಗೆ ಚಪ್ಪಲಿಯಿಂದ ನನ್ನ ಬೆನ್ನಿಗೆ ಹೊಡೆದಿರುತ್ತಾರೆ. ಆರೋಪಿ 5 ಸಹ ಅಲ್ಲಿಯೇ ಇದ್ದು ಅವರ ಕುಮ್ಮಕ್ಕಿನ ಮೇರೆಗೆ ಉಳಿದ ಆರೋಪಿತರು ನನಗೆ ಹೊಡೆದಿರುತ್ತಾರೆ. ನಿನ್ನನ್ನು ಜೈಲಿಗೆ ಕಳುಹಿಸುತ್ತೇನೆಂದು ಆರೋಪಿ 5 ಹೇಳಿದ್ದು ಊರಿನ ಜನ ರಾಜಿ ಪಂಚಾಯಿತಿ ಮಾಡುವುದಾಗಿ ಹೇಳಿದ್ದು ಆರೋಪಿ 1 ಮತ್ತು ಬಸವಲಿಂಗಪ್ಪವರು ಒಪ್ಪಿಕೊಂಡಿರುವುದಿಲ್ಲ. ದಿಃ 13.01.2019 ರಂದು ನಾನು ಪೊಲಿಸ ಠಾಣೆಗೆ ದೂರನ್ನು ನೀಡಿರುತ್ತೇನೆ ಅದನ್ನು ನಿ.ಪಿ 1 ಎಂದು ಸಹಿಯನ್ನು ನಿ.ಪಿ 1 (ಎ) ಎಂದು ಗುರುತಿಸಲಾಯಿತು.

ಚಾ.ಸಾ. 5 ಮತ್ತು 6 ಅವರು ಬಂದು ಜಗಳ ಬಿಡಿಸಿರುತ್ತಾರೆ. ದೂರನ್ನು ನೀಡಿದ ನಂತರ ದಿನಾಂಕ 14.01.2019 ರಂದು ಪೊಲಿಸರು 11.30 ರಿಂದ 12.00 ಗಂಟೆಯ

ಸಮಯದಲ್ಲಿ ಸ್ಥಳಕ್ಕೆ ಬಂದು ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆಗೆ ನನ್ನ ಸಹಿ ಇರುತ್ತದೆ ಅದನ್ನು ನಿ.ಪಿ 2 ಎಂದು ಸಹಿಯನ್ನು ನಿ.ಪಿ 2(ಎ) ಎಂದು ಗುರುತಿಸಲಾಯಿತು. ಪಂಚನಾಮೆಗೆ ಚಾ.ಸಾ. 7 ಮತ್ತು 8 ಅವರ ಸಹಿ ಮಾಡಿರುತ್ತಾರೆ. ಪೋಲಿಸರು ಪಂಚನಾಮೆ ಮಾಡಿ ಸೀರೆಯನ್ನು ಜಪ್ತು ಮಾಡಿಕೊಂಡಿರುತ್ತಾರೆ. ಅದನ್ನು ನೋಡಿದರೆ ನಾನು ಗುರುತಿಸುತ್ತೇನೆ. ಅದನ್ನು ಮು. ಮಾ. 1 ಎಂದು ಗುರುತಿಸಲಾಯಿತು. ನಾನು ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದು ಅನುಮತಿ ನೀಡಿಲಾಗಿದೆ. )**

**ಪಾಟೀ ಸವಾಲುಃ ಸಹಾಯಕ ಅಭಿಯೋಜಕರಿಂದಃ**

ಗಲಾಟೆ ಆದ ಸಮಯದಲ್ಲಿ ಆರೋಪಿತರು ನಮಗೆ ಅವಾಚ್ಯ ಅಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಜಮೀನಿಗೆ ಹೇಗೆ ಬರುತ್ತೀರಾ ಬನ್ನಿ ನೋಡಿಕೊಳ್ಳುತ್ತೇವೆ ಎಂದು ಹೇಳಿರುತ್ತಾರೆ ಎಂದರೆ ಸರಿ. ನಾನು ಕೇಳಲು ಹೋದಾಗ ಆರೋಪಿ 1 ನನ್ನ ಕೊರಳ ಪಟ್ಟಿ ಹಿಡಿದು ನುಕಿರುತ್ತಾರೆ ಎಂದರೆ ಸರಿ. ನಂತರ ಆರೋಪಿ 1 ನನ್ನ ತಾಯಿಯ ಸೀರೆಯನ್ನು ಎಳೆದಾಡಿ ಅವಮಾವ ಮಾಡಿರುತ್ತಾರೆ ಎಂದರೆ ಸರಿ. ಆರೋಪಿ 2 ನೀವು ಜಮೀನಿನ ಹತ್ತಿರ ಬಂದರೆ ನಿಮಗೆ ಕೊಲೆ ಮಾಡದೆ ಬಿಡುವುದಿಲ್ಲವೆಂದು ಪ್ರಾಣ ಬೆದರಿಕೆ ಹಾಕಿರುತ್ತಾರೆ ಎಂದರೆ ಸರಿ. ಆರೋಪಿ 3 ಮತ್ತು 4 ಚಾ.ಸಾ, 3 ಅವರಿಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದರೆ ಸರಿ. ಬೆಟ್ಟಯ್ಯ ಅವರು ನನ್ನ ತಂದೆಗೆ ಚಪ್ಪಲಿಯಿಂದ ಹೊಡೆದಿಲ್ಲ ಕೈಯಿಂದ ಬೆನ್ನಿಗೆ ಹೊಡೆರುತ್ತಾರೆ ಮತ್ತು ಬಸವಲಿಂಗಪ್ಪ ಅವರು ಆ ದಿನ ಸ್ಥಳದಲ್ಲಿ ಇರಲಿಲ್ಲ ಯಾವುದೇ ಕುಮ್ಮಕ್ಕು ನೀಡಿರುವುದಿಲ್ಲವೆಂದು ನಾನು ಮರು ಹೇಳಿಕೆಯಲ್ಲಿ ಹೇಳಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯ ಸದರಿ ಭಾಗವನ್ನು ನಿ.ಪಿ 3 ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದು ಕೋರಿಕೆ ಮೇರೆಗೆ ಮುಂದೊಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**